(೪) ಮೈಸೂರು ನಗರದ ಊಟಗಳ್ಳಿಯಲ್ಲಿ ಗೃಹ ಮಂಡಲಿಯವರು ನಿರ್ಮಿಸಿರುವ ಮನೆಗಳು

ಶ್ರೀಮತಿ ದಮಯಂತಿ ಬೋರೇಗೌಡ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ಮೈಸೂರಿನ ಊಟಗಳ್ಳಿಯಲ್ಲಿ ನ್ಯಾಷನಲ್ ಹೌಸಿಂಗ್ ಬ್ಯಾಂಕ್ ವತಿಯಿಂದ ಮೊದಲನೆ ಹಂತದಲ್ಲಿ ಮನೆಗಳನ್ನು ನಿರ್ಮಾಣ ಮಾಡುತ್ತಿದ್ದರು. ಅದಕ್ಕಾಗಿ ಅರ್ಜಿದಾರರುಗಳಿಂದ ಅರ್ಜಿ ಮತ್ತು ಫೀಸನ್ನು ತೆಗೆದುಕೊಂಡರು. ಆದರೆ, ಈಗ ಮನೆಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಮಾಡಿಲ್ಲ. ಡ್ರೈನೇಜ್ ಮಾಡಿಲ್ಲ. ಹಿಂದಿರುವಾಗ ಅರ್ಜಿದಾರರು ಪೂರ್ತಿ ಹಣವನ್ನು ಕಟ್ಟದೆ ಹೋದರೆ ನಿಮ್ಮ ಅಲಾಟ್‌ಮೆಂಟ್‌ನ್ನು ಕ್ಯಾನ್ಸಲ್ ಮಾಡುತ್ತೇವೆಂದು ನೋಟೀಸ್ ಕೊಡಲಾಗಿದೆ. ಮನೆಗಳ ಪೊಸೆಷನ್ ಸರ್ಟಿಫಿಕೇಟ್‌ನ್ನು ತಂದು ಕೊಟ್ಟರೆ ಮನೆಗೆ ಕಟ್ಟಬೇಕಾದ ಹಣವನ್ನು ನಾವು ಕೊಡುತ್ತೇವೆಂದು ಹೌಸಿಂಗ್ ಬ್ಯಾಂಕ್‌ನವರು ಹೇಳುತ್ತಾರೆ. ಇಂಥಹ ಪರಿಸ್ಥಿತಿ ಇರುವಾಗ ಪೂರ್ಣ ಹಣ ಕಟ್ಟದೆ ಇದ್ದರೆ ಅಲಾಟ್‌ಮೆಂಟ್ ಕ್ಯಾನ್ಸಲ್ ಮಾಡುತ್ತೇವೆಂದು ನೋಟೀಸ್ ಕೊಡುವುದು ಸರಿಯಲ್ಲ ಅದೂ ಅಲ್ಲದೆ ಒಂದೇ ಸಾರಿ ಹಣ ಕಟ್ಟುವುದಕ್ಕೂ ಅಲಾಟಿಗಳಿಗೆ ಕಷ್ಟವಾಗುತ್ತದೆ. ಇವರ ಮಾತಿನಂತೆ ಒಂದು ವರ್ಷದಲ್ಲಿ ಮನೆಗಳನ್ನು ಕಟ್ಟಲೇ ಇಲ್ಲ. ನಾನೂ ಸಹ ಅಲ್ಲಿ ಹೋಗಿ ನೋಡಿದಾಗ ಒಂದೇ ಮೋಟು ಗೋಡೆಗಳು ನಿಂತಿದ್ದವು. ಆದರೆ ಈಗ ಮನೆಗಳನ್ನು ಮಾತ್ರ ಕಟ್ಟಿದ್ದಾರೆ, ಇನ್ನೂ ಸಿವಿಕ್ ಅಮಿನಿಟೀಸ್‌ಗಳನ್ನು ಒದಗಿಸಿಲ್ಲ. ಅಂಥಾದ್ದರಲ್ಲಿ ಕ್ಯಾನ್ಸಲೇಷನ್‌ಗೆ ಇವರು ನೋಟೀಸ್ ಕೊಡುವುದು ತರವಲ್ಲ. ಆದ್ದರಿಂದ, ಕ್ಯಾನ್ಸಲೇಷನ್ ಮಾಡುತ್ತೇವೆಂದು ನೋಟೀಸ್ ಕೊಡಬಾರದೆಂದು ಅಧಿಕಾರಿಗಳಿಗೆ ಮಾನ್ಯ ಮಂತ್ರಿಗಳು ಸೂಚನೆ ಕೊಡಬೇಕು. ಅಲ್ಲಿನ ಎಲ್ಲಾ ಕೆಲಸಗಳು ಮುಗಿಯುವವರೆಗೆ ಹಾಗೂ ಹೌಸಿಂಗ್ ಬ್ಯಾಂಕ್‌ನವರು ಸಾಲ ಮಂಜೂರು ಮಾಡುವವರೆಗೆ ಕ್ಯಾನ್ಸಲೇಷನ್ ಮಾಡುವ ಕೆಲಸವನ್ನು ಪೋಸ್ಟ್‌ಪೋನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಗೋವಿನಾಥ್ ಆರ್. ಸಾಂಡ್ರ (ವಸತಿ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಹೌಸಿಂಗ್ ಬೋರ್ಡ್‌ನವರು ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಯೋಜನೆಯಡಿಯಲ್ಲಿ ೪೭೨ ಮನೆಗಳನ್ನು ಮೈಸೂರಿನ ಊಟಗಳ್ಳಿಯಲ್ಲಿ ತೆಗೆದುಕೊಂಡು ಕಾರ್ಯಗತ ಮಾಡುತ್ತಿದ್ದಾರೆ. ಆ ಕೆಲಸದಲ್ಲಿ ಸ್ವಲ್ಪ ಡಿಲೇ ಆಗಿದೆ. ಆ ಸ್ಕೀಮ್‌ನಲ್ಲಿರುವ ಟರ್ಮ್ಸ್ ಆಫ್ ಕಂಡೀಷನ್ ಏನೆಂದರೆ, ಒಂದು ವರ್ಷದೊಳಗೆ ಹಣವನ್ನು ಹೌಸಿಂಗ್ ಬ್ಯಾಂಕ್‌ನಲ್ಲಿಟ್ಟು ನಂತರ ಅವರಿಂದ ಹಣ ಪಡೆದುಕೊಂಡು ಹಣವನ್ನು ಸೆಟ್ಲಿಸಬೇಕೆಂದು ಅಗ್ರಿಮೆಂಟ್ ಆಗಿದೆ. ಆ ಅಗ್ರಿಮೆಂಟ್ ಪ್ರಕಾರ ಇವತ್ತಿನ ದಿನಸ ಅವರಿಗೆ ನೋಟೀಸ್ ಕೊಡಲಾಗಿದೆ. ಅವರು ಹೇಳಿದ ಹಾಗೇಯೇ ಇನ್ನೂ ಕೆಲಸಗಳು ಆಗಬೇಕಾಗಿವೆ. ಈಗಾಗಲೇ ಕೆಲಸಗಳು ಪ್ರಾರಂಭವಾಗಿವೆ, ನೀರು ಮತ್ತು ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಏನು ಕೆಲಸ ಮಾಡಬೇಕೋ ಅದರ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಗೂ ತಿಳಿಸಿದ್ದೇವೆ. ಅಮೇಲೆ ಸನ್ಮಾನ್ಯ ಮಾನ್ಯ ಸದಸ್ಯರಾದ ಶ್ರೀಯುತರು, ಹೌಸಿಂಗ್ ಬ್ಯಾಂಕ್‌ನವರು ಸಾಲ ಕೊಡುತ್ತಿಲ್ಲವೆಂದು ಹೇಳಿದ್ದಾರೆ, ನಮಗೆ ತಿಳಿದ ಮಟ್ಟಿಗೆ ಈಗಾಗಲೇ ೧೦೦ ಜನ ಬ್ಯಾಂಕಿನ ಸಹಾಯವನ್ನು ಪಡೆದು ನಮಗೆ ಹಣವನ್ನು ಪಾವತಿ ಮಾಡಿದ್ದಾರೆ. ಯಾವುದೋ ಒಂದು ಬ್ಯಾಂಕಿನವರು, ಪೊಸೆಷನ್ ಸರ್ಟಿಫಿಕೇಟ್ ಇದ್ರೆ ಮಾತ್ರ ಸಾಲ ಕೊಡುತ್ತಿದ್ದೇವೆ ಇಲ್ಲದಿದ್ದರೆ ಇಲ್ಲ ಎಂದು ಹೇಳುವ ಮಾತನ್ನು ನಾನು ನಂಬಲಿಕ್ಕೆ ತಾಯಾರಿಲ್ಲ. ನಾವು ಏನೇ ಕ್ರಮ ತೆಗೆದುಕೊಂಡರೂ ಎಲ್ಲರಿಗೂ ಅನುಕೂಲವಾಗುವ ಹಾಗೇ ಕ್ರಮ ತೆಗೆದುಕೊಳ್ಳುತ್ತೇನೆ. ನೋಟೀಸ್ ಕೊಟ್ಟಿದ್ದಾರೆಂದು ಏನು ಹೆದರಿಕೆಯಿಂದ ಇವರು ಹೇಳುತ್ತಿದ್ದಾರೆ, ನಾವು ಕೂಡ ನ್ಯಾಷನಲ್ ಹೌಸಿಂಗ್ ಬ್ಯಾಂಕ್‌ನಿಂದ ಹಣಪಡೆದು ಈ ಕೆಲಸ ಮಾಡಿಸಿದ್ದೇವೆ. ಆ ಹಣವನ್ನು ನಾವು ೩ ವರ್ಷಗಳೊಳಗೆ ವಾಪಸ್ಸು ಮಾಡಬೇಕಾಗಿದೆ ಆದಕ್ಕಾಗಿ ಈ ಬೆನಿಫಿಷಿಯರ್ಸ್‌ ನಮಗೆ ಸಹಕಾರ ಮಾಡಬೇಕು. ಆಮೇಲೆ ಅಲ್ಲಿ ಉಳಿದಿರುವ ಕೆಲಸಗಳು ಅಂದರೆ ವಿದ್ಯುಚ್ಛಕ್ತಿ, ನೀರು, ರಸ್ತೆಗಳು ಎಲ್ಲವನ್ನೂ ಅವಷ್ಟು ಬೇಗ ಮಾಡಿಸಿಕೊಡಲಾಗುತ್ತದೆಂದು ನಾನು ಭರವಸೆ ಕೊಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ.—ಹೌಸಿಂಗ್ ಬೋರ್ಡ್‌ನವರು ಟರ್ಮ್ಸ್ ಆಂಡ್ ಕಂಡೀಷನ್ ಪ್ರಕಾರ ನಡೆದುಕೊಂಡಿಲ್ಲ. ಅಲ್ಲಿ ಬೇಕಾದಷ್ಟು ಅವ್ಯವಸ್ಥೆ ಇದೆ. ಅವನ್ನೆಲ್ಲಾ ಸರಿಪಡಿಸುವುದರ ಜೊತೆಗೆ ಹಣ ಕಟ್ಟಲು ಅಲಾಟೀಸ್‌ಗೆ ಸಮಯ ಕೊಡಬೇಕು. ಪೊಸಿಷನ್ ಸರ್ಟಿಫಿಕೇಟ್ ಇಲ್ಲದೆ ಸಾಲ

† ಈ ಟಿಪ್ಪಣಿಯು ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿರುವುದಿಲ್ಲವೆಂದು ಸೂಚಿಸುತ್ತದೆ.

ಕೊಡುವುದಿಲ್ಲ ಎಂದು ಹೇಳಿರುವುದನ್ನು ನಂಬಲಿಕ್ಕೆ ಸಾಧ್ಯವಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಬೇಕಾದರೆ ಅದೇ ರೀತಿ ನಾವು ಬ್ಯಾಂಕ್ ನವರಿಂದ ಬರೆಸಿಕೊಂಡು ತಮಗೆ ಕೊಡುತ್ತೇವೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರ.—ಈಗಾಗಲೇ ನೂರು ಜನ ಹಣ ತುಂಬಿದ್ದಾರೆ. ಕೆಲವು ಬ್ಯಾಂಕ್‌ನವರು ಕೊಡುವುದಕ್ಕೆ ಮನಸ್ಸು ಇಲ್ಲದಿದ್ದರೆ ಇಂಥ ಉತ್ತರಗಳನ್ನು ಕೊಡುತ್ತಾರೆ. ಆ ಉತ್ತರವನ್ನು ಅವಲಂಬಿಸಿ ಪ್ರಶ್ನೆ ಮಾಡಿದರೆ ನಾವು ನಂಬಿಲಕ್ಕೆ ಸಾಧ್ಯವಿಲ್ಲ. ಆದರೆ ಮಾನ್ಯ ಸದಸ್ಯರಿಂಯವರು ಹೇಳಿರುವ ಪ್ರಕಾರ ಅದನ್ನು ವಿಚಾರ ಮಾಡುತ್ತೇವೆ ಮತ್ತು ಅಲಾಟೀಸ್ ಬಗ್ಗೆ ಉಗ್ರವಾದ ಕ್ರಮ ತೆಗೆದುಕೊಳ್ಳುವುದಿಲ್ಲ.

(೫) ಟ್ಯಾಂಕ್ ಇರುವ ಪಂಚಾಯತಿ ಯವರು ಬೇರೆ ಪಂಚಾಯತಿಗೆ ಸೇರಿದ ಗ್ರಾಮಕ್ಕೆ ನೀರನ್ನು ಕೊಡದೇ ಇರುವುದರ ಬಗ್ಗೆ

ಶ್ರೀ ಸೋಮಪ್ಪ ಸುವರ್ಣ.—ಮಂಡಲ ಪಂಚಾಯಿತಿಗಳನ್ನು ವಿಂಗಡಿಸಿ ಗ್ರಾಮ ಪಂಚಾಯಿತಿಗಳಾಗಿ ಮಾಡಿದ್ದೇವೆ. ಇದರಿಂದ ಸಮಸ್ಯೆ ಏನು ಬಂದಿದೆ ಎಂದರೆ ಒಂದು ಮಂಡಲದಲ್ಲಿರುವಂಥ ನೀರಿನ ಟ್ಯಾಂಕ್‌ನಿಂದ ಇನ್ನೊಂದು ಹೊಸ ಪಂಚಾಯಿತಿ ಗ್ರಾಮಕ್ಕೆ ನೀರು ಹರಿದು ಹೋಗಬೇಕಾಗಿದೆ. ಪಂಚಾಯಿತಿ ವಿಭಾಗವಾದ ಕಾರಣ ನೀರನ್ನು ಹೇಗೆ ಕೊಡುತ್ತಾರೆಂದು ಒಂದು ದೊಡ್ಡ ಸಮಸ್ಯೆ ಇದೆ.

ಉಪಾಧ್ಯಕ್ಷರು.—ಈ ನೀರಿನ ಸಮಸ್ಯೆ ಬಗ್ಗೆ ತಾವು ಗಮನ ಸೆಳೆಯುವ ಸೂಚನೆ ಮೂಲಕ ತೆಗೆದುಕೊಂಡು ಬನ್ನಿ. ಈಗ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸೋಮಪ್ಪ ಸುವರ್ಣ.—ಟ್ಯಾಂಕ್ ಇರುವ ಪಂಚಾಯಿತಿಯವರು. ಬೇರೆ ಪಂಚಾಯಿತಿಗೆ ಸೇರಿದ ಗ್ರಾಮಕ್ಕೆ ನೀರು ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ನೀರು ಸಿಗದಿದ್ದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಶಿಘ್ರವಾಗಿ ಆಲೋಚಿಸಿ ಮುಂಚಿನ ಹಾಗೆಯೇ ನೀರು ದೊರಕಿಸಿ ಕೊಡುವುದಕ್ಕೆ ಏನಾದರೂ ಮಾಡಬೇಕೆಂದು ನಾನು ಸರ್ಕಾರದಲ್ಲಿ ಕೇಳುತ್ತೇನೆ.

(೬) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಲೆ ಬಾಳುವ ಮರಗಳ ಸಾಗಾಣಿಕೆ

ಶ್ರೀ ಬಿ ಎ ಇದಿನಬ್ಬ.—ಮಾನ್ಯ ಅಧ್ಯಕ್ಷರೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಪ್ರದೇಶದಲ್ಲಿ ಬಹಳ ದೊಡ್ಡ ಬೇಸಂದ ಕೆಲಸ ನಡೆಯುತ್ತಿದೆ. ಸರಹದ್ದಿ ಮತ್ತು ವಿಟ್ಲದ ಹತ್ತಿರ ಚೆಕ್ ಪೋಸ್ಟ್‌ಗಳು ಉಂಟು. ಕರ್ನಾಟಕದ ಗಂಧದ ಮರಗಳು, ಬೀಟೆ, ಮತ್ತು ತೇಗ ಕಳ್ಳತನದಿಂದ ಕೇರಳಾ ರಾಜ್ಯಕ್ಕೆ ಹೋಗುತ್ತಿವೆ. ಯಾರಾದರೂ ಪಾಪದ ಮನೆಗೆ ಸೌದಿ ತೆಗೆದುಕೊಂಡು ಹೋದರೆ ಅವನನ್ನು ಹಿಡಿಯುತ್ತಾರೆ. ಕಳ್ಳತನದಲ್ಲಿ ಹೋಗುವ ದೊಡ್ಡ ಮಾಲನ್ನು ಬಿಟ್ಟುಬಿಡುತ್ತಾರೆ. ಇದರಿಂದ ನಮ್ಮ ರಾಜ್ಯಕ್ಕೆ ಭಾರೀ ನಷ್ಟ. ಇದೆಲ್ಲಾ ಬೇಲಿಯವರಿಗೆ ಗೊತ್ತಾಗುವುದಿಲ್ಲ. ಗಡಿ ಭಾಗದಲ್ಲಿರುವ ನಮಗೆ ಮಾತ್ರ ಇದು ಗೊತ್ತಾಗುತ್ತದೆ. ಉಕ್ಕಡದಲ್ಲಿ ಇದನ್ನೆಲ್ಲಾ ಹಾಗೇ ಬಿಟ್ಟುಬಿಡುತ್ತಾರೆ. ಅದರ ಬಗ್ಗೆ ಮಾನ್ಯ ಅರಣ್ಯ ಮಂತ್ರಿಯವರು ಬಹಳ ಕಠಿಣ ಮತ್ತು ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಕರ್ನಾಟಕ ರಾಜ್ಯಕ್ಕೆ ಬಹಳ ದೊಡ್ಡ ನಷ್ಟವಾಗುತ್ತದೆ. ಇದರಿಂದ ಕರ್ನಾಟಕ ರಾಜ್ಯದ ಸಂಪತ್ತಿನ ನಾಶವಾಗುತ್ತದೆ. ಕರ್ನಾಟಕದಲ್ಲಿ ತೇಗಿನ ಮರ, ಗಂಧದ ಮರ, ತೇಗದ ಮರ ಉಂಟು. ಇದು ಸುಂದರ ನಾಡು, ಚೆಂದದ ನಾಡು. ಅಂದದ ನಾಡು ತೆಂಗಿನ ಕಂಗಿನ, ಬಾಳೆಯ ತೋಟದ ಸುಂದರ ನಾಡಿನಲ್ಲಿ ಕಡೆಗೆ ಸುಂದರ ಮರಗಳು ಉಳಿಯುತ್ತದೆ. ಇದೆಲ್ಲಾ ಹೋದರೆ ಕೊನೆಗೆ ಏನು ಉಳಿಯುತ್ತದೆ ? ಇದರ ಬಗ್ಗೆ ಮಾನ್ಯ ಅರಣ್ಯ ಮಂತ್ರಿಯವರು ಗಮನ ಹರಿಸಿ ದಿನನಿತ್ಯ ಹೋಗತಕ್ಕಂಥ ಮರಗಳನ್ನು ತಪಾಸಣೆಗಾಗಿ ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿ.

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ಗಡಿ ಪ್ರದೇಶಗಳಲ್ಲಿ ಚೆಕ್ ಪೋಸ್ಟ್‌ಗಳನ್ನು ಮಾಡಿ ಕಳ್ಳ ಸಾಣಿಕೆಯನ್ನು ತಡಯಲು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಸಿಬ್ಬಂದಿಗಳಿಗೆ ವಾಕಿ-ಟಾಕಿ ಕೊಟ್ಟಿದ್ದೇವೆ, ಅನೇಕ ಆಧುನಿಕ ಉಪಕರಣಗಳನ್ನು ಒದಗಿಸಿದ್ದೇವೆ. ಅದರ ಜೊತೆಗೆ ವೇಗವಾಗಿ ಹೋಗತಕ್ಕಂಥ ವಾಹನಗಳನ್ನು ಕೊಟ್ಟಿದ್ದೇವೆ. ಆ ಜಾಗದಲ್ಲಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಇದ್ದರೆ ಆ ಜಾಗಕ್ಕೆ ದಕ್ಷ, ಮತ್ತು ಪ್ರಾಮಾಣಿಕ ಅಧಿಕಾರಿಗಳನ್ನು ಹಾಕಿ ಸ್ಮಗ್ಲಿಂಗ್ ಆಗುವುದನ್ನು ತಡೆಗಟ್ಟುವುದಕ್ಕೆ ಮುಂದಿನ ದಿನಗಳಲ್ಲಿ ತೆಗೆದುಕೊಳ್ಳುತ್ತೇವೆ.